# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉಡುಪಿ ಜಿಲ್ಲೆ

## ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ ಅನುಷ್ಠಾನಗೊಳಸುತ್ತಿರುವ ಕಾರ್ಯಕ್ರಮಗಳು

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ವತಿಯಿಂದ ಉಡುಪಿ ಜಿಲ್ಲೆಯಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ/ ಬಾಲಕಿಯರ ವಿದ್ಯಾರ್ಥಿನಿಲಯಗಳು, ಮೊರಾರ್ಜಿದೇಸಾಯಿ ವಸತಿ ಶಾಲೆಗಳ ನಿರ್ವಹಣೆ, ಖಾಸಗಿ ಅನುದಾನಿತ ನಿಲಯಗಳು ಹಾಗೂ ಅನಾಥಾಲಯಗಳಿಗೆ ಅನುದಾನ ಮಂಜೂರಾತಿ, ನಿರುದ್ಯೋಗಿ ಮಹಿಳಾ ಅಭ್ಯರ್ಥಿಗಳಿಗೆ ಹೊಲಿಗೆ ತರಬೇತಿ ಕೇಂದ್ರದ ನಿರ್ವಹಣೆ, ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಮತ್ತು ಶುಲ್ಕವಿನಾಯಿತಿ ಮಂಜೂರಾತಿ, ಪ್ರತಿಭಾ ಪುರಸ್ಕಾರ ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಮತ್ತು ವಿದ್ಯಾಸಿರಿ ವಿದ್ಯಾರ್ಥಿವೇತನ ಮಂಜೂರಾತಿ, ಕೌಶಲ್ಯ ಕಾರ್ಯಕ್ರಮದಲ್ಲಿ ನಿರುದ್ಯೋಗಿ ಅಭ್ಯರ್ಥಿಗಳಿಗೆ ಕಂಪ್ಯೂಟರ್ , ಪ್ಲಾಸ್ಟಿಕ್ ಟೆಕ್ನಾಲಜಿ, ಮತ್ತಿತರ ವೃತ್ತಿಪರ ಕೋರ್ಸುಗಳಲ್ಲಿ ತರಬೇತಿ ನೀಡಿ ಶಿಷ್ಯವೇತನ ಮಂಜೂರಾತಿ, ನರ್ಸಿಂಗ್ ಕೋರ್ಸಿನಲ್ಲಿ ವ್ಯಾಸಂಗ ಮಾಡುವ ಅಭ್ಯರ್ಥಿಗಳಿಗೆ ಸ್ಟೈಫಂಡ್ ಮಂಜೂರಾತಿ, ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರೆಸಲು ಪ್ರೋತ್ಸಾಹಧನ ಮಂಜೂರಾತಿ, ಐ.ಟಿ.ಐ. ಡಿಪ್ಲೋಮಾ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಮಂಜೂರಾತಿ , ಕಾನೂನು ಪದವೀಧರರಿಗೆ ವಕೀಲಿ ವೃತ್ತಿಯಲ್ಲಿ ತರಬೇತಿ ನೀಡಿ ಶಿಷ್ಯವೇತನ ಮಂಜೂರಾತಿ, ವಾಹನಚಾಲನಾ ತರಬೇತಿ, ವಿದ್ಯಾಸಿರಿ, ಸಮಾಜದ ವಿವಿಧ ಸಮುದಾಯಕ್ಕೆ ಸೇರಿದ ಸಂಘ ಸಂಸ್ಥೆಗಳಿಗೆ ಸಮುದಾಯ ಭವನ ನಿರ್ಮಾಣಕ್ಕೆ ಸಹಾಯಧನ, ಅಲ್ಪಸಂಖ್ಯಾತರ ಮದುವೆಗೆ ಬಿದಾಯಿ ಯೋಜನೆಯಡಿ ಸಹಾಯಧನ ನೀಡಿಕೆ. ಚರ್ಚ್‌ಗಳ ದುರಸ್ಥಿ, ಜೈನ್ ಬಸದಿಗಳ ಜೀರ್ಣೋದ್ಧಾರ ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

### ಹಿಂದುಳಿದ ವರ್ಗಗಳ ಇಲಾಖೆಯಿಂದ ಅನುಷ್ಠಾನಗೊಳಸುತ್ತಿರುವ ಕಾರ್ಯಕ್ರಮಗಳ ವಿವರ.

1. **ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆ:**
   ಜಿಲ್ಲೆಯಲ್ಲಿ 12 ಮೆಟ್ರಿಕ್ ಪೂರ್ವ ಬಾಲಕರ ಹಾಗೂ 06 ಮೆಟ್ರಿಕ್ ಪೂರ್ವ ಬಾಲಕಿಯರ ನಿಲಯಗಳಿದ್ದು ಈ ನಿಲಯಗಳಲ್ಲಿ 515 ಬಾಲಕರು ಮತ್ತು 285 ಬಾಲಕಿಯರು ಒಟ್ಟು 800 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದ್ದು ಇವರಿಗೆ ಸರ್ಕಾರದ ವತಿಯಿಂದ ಉಚಿತವಾಗಿ ಊಟ. ವಸತಿ, ಪಠ್ಯ ಪುಸ್ತಕ. ಲೇಖನ ಸಾಮಗ್ರಿ. ಸಮವಸ್ತ್ರ , ಹಾಸಿಗೆ. ಹೊದಿಕೆ. ತಟ್ಟೆ. ಲೋಟ . ಟ್ರಂಕ್ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.
2. **ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ:**

ಜಿಲ್ಲೆಯಲ್ಲಿ 09 ಮೆಟ್ರಿಕ್ ನಂತರದ ಬಾಲಕರ ಮತ್ತು 13 ಮೆಟ್ರಿಕ್ ನಂತರದ ಬಾಲಕಿಯರ ನಿಲಯಗಳಿದ್ದು 800 ಬಾಲಕರು ಮತ್ತು 1415 ಬಾಲಕಿಯರು ಒಟ್ಟು 2215 ವಿದ್ಯಾರ್ಥಿಗಳಿಗೆ ಈ ನಿಲಯಗಳಲ್ಲಿ ಪ್ರವೇಶಾವಕಾಶವಿದ್ದು ಇವರಿಗೆ ಉಚಿತವಾಗಿ ಊಟ ವಸತಿ , ಹಾಸಿಗೆ ಹೊದಿಕೆ, ಗ್ರಂಥಾಲಯ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

3. **ಖಾಸಗಿ ನಿಲಯಗಳಿಗೆ ಸಹಾಯಧನ ಮಂಜೂರಾತಿ:**

ಜಿಲ್ಲೆಯಲ್ಲಿ 2 ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳಿದ್ದು, ಒಟ್ಟು ಮಂಜೂರಾತಿ ಸಂಖ್ಯೆ 92 ಆಗಿರುತ್ತದೆ. ವಿದ್ಯಾರ್ಥಿಗಳ ಊಟದ ವೆಚ್ಚಕ್ಕೆ ಒಬ್ಬ ವಿದ್ಯಾರ್ಥಿಗೆ ಮಾಹೆಯಾನ ರೂ. 1000 ರ ದರದಲ್ಲಿ ಭೋಜನಾ ವೆಚ್ಚವನ್ನು ಮಂಜೂರು ಮಾಡಲಾಗುತ್ತದೆ.

4. **ಹೊಲಿಗೆ ತರಬೇತಿ ಕೇಂದ್ರ** :

ಇಲಾಖೆಯ ವತಿಯಿಂದ ಉಡುಪಿಯ ಬನ್ನಂಜೆಯಲ್ಲಿ 20 ಸಂಖ್ಯಾಬಲದ ಹೊಲಿಗೆ ತರಬೇತಿ ಕೇಂದ್ರವನ್ನು ನಡೆಸಲಾಗುತ್ತಿದ್ದು ಈ ಕೇಂದ್ರದಲ್ಲಿ ಪ್ರವೇಶ ಪಡೆದ ಅರ್ಹ ಅಭ್ಯರ್ಥಿಗಳಿಗೆ ಮಾಹೆಯಾನ ರು. 300/- ರಂತೆ ಸ್ಟೈಫಂಡ್ ನೀಡಿ ಒಂದು ವರ್ಷ ಉಚಿತ ತರಬೇತಿ ನೀಡಲಾಗುತ್ತಿದೆ. ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಉಚಿತ ಹೊಲಿಗೆ ಯಂತ್ರವನ್ನು ನೀಡಲಾಗುವುದು.

5. **ಹಿಂದುಳಿದ ವರ್ಗಗಳ ಆಂಗ್ಲ ಮಾಧ್ಯಮದ ಮೊರಾರ್ಜಿದೇಸಾಯಿ ವಸತಿ ಶಾಲೆಗಳು:**

ಉಡುಪಿ ಜಿಲ್ಲೆಯಲ್ಲಿ ಕಾರ್ಕಳ, ಕುಂದಾಪುರ, ಅಲೆವೂರು, ಬೈಂದೂರಿನಲ್ಲಿ ಹಿಂದುಳಿದ ವರ್ಗಗಳ ಆಂಗ್ಲ ಮಾಧ್ಯಮದ ಮೊರಾರ್ಜಿದೇಸಾಯಿ ವಸತಿ ಶಾಲೆಗಳಿದ್ದು ಇಲ್ಲಿ 450 ಬಾಲಕರು ಮತ್ತು 396 ಬಾಲಕಿಯರು ಪ್ರವೇಶ ಪಡೆದಿರುತ್ತಾರೆ. ಇಲ್ಲಿ ಪ್ರವೇಶ ಪಡೆದ 6 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಊಟ, ವಸತಿ, ಸಮವಸ್ತ್ರ, ಪಠ್ಯಪುಸ್ತಕ, ಲೇಖನ ಸಾಮಗ್ರಿ, ಹಾಸಿಗೆ ಹೊದಿಕೆ, ಟ್ರಂಕು, ಮಂಚ, ಕ್ರೀಡಾ ಸಾಮಗ್ರಿ ಮುಂತಾದ ಸೌಲಭ್ಯವನ್ನು ಕಲ್ಪಿಸಲಾಗಿದೆ. ಕಾರ್ಕಳದಲ್ಲಿ ಮೊರಾರ್ಜಿದೇಸಾಯಿ ಪದವಿ ಪೂರ್ವ ಕಾಲೇಜನ್ನು ನಡೆಸಲಾಗುತ್ತಿದ್ದು 160 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಇರುತ್ತದೆ.

6. **ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮಂಜೂರಾತಿ:**

ಜಿಲ್ಲೆಯಲ್ಲಿ 1ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅರ್ಹತೆ ಮತ್ತು ಕುಟುಂಬದ ವಾರ್ಷಿಕ ಆದಾಯ ಮಿತಿ ರೂ. 44,500/- ಇರುವ 1ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ ರೂ. 750/- ಹಾಗೂ 6ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ರೂ. 900/- ರಂತೆ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ರೂ 1000/-ರಂತೆ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುತ್ತದೆ. ಅಲ್ಲದೆ ಕೇಂದ್ರ ಪುರಸ್ಕೃತ ಯೋಜನೆಯಲ್ಲಿಯೂ ಸಹ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ.

7. **ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರಾತಿ:**

ಜಿಲ್ಲೆಯ ಕಾಲೇಜುಗಳಲ್ಲಿ ಪಿ.ಯು.ಸಿ. ಪದವಿ. ಸ್ನಾತಕೋತ್ತರ. ತಾಂತ್ರಿಕ ಮತ್ತಿತರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ ರೂ. 1600 , ರೂ. 2100 ಮತ್ತು ರೂ. 3350/- ಮತ್ತು 3500/- ರ

ದರದಲ್ಲಿ ಅರ್ಹತೆಯನ್ನಾಧರಿಸಿ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ. ಅಲ್ಲದೆ ಕೇಂದ್ರ ಪುರಸ್ಕೃತ ಯೋಜನೆಯಲ್ಲಿಯೂ ಸಹಾ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ರೂ. 1600/-, ಪದವಿ ವಿದ್ಯಾರ್ಥಿಗಳಿಗೆ ರೂ. 2,100/-, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ. 3,350/- ರಂತೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ.

8. <u>ವಿದ್ಯಾಸಿರಿ ಯೋಜನೆ</u>

ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಾಹೆಯಾನ ತಲಾ ರೂ. 1500/-ರ ದರದಲ್ಲಿ 10 ತಿಂಗಳ ಅವದಿಗೆ ಊಟ ಮತ್ತು ವಸತಿ ಬಾಬ್ತು ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ.

9. <u>ಶುಲ್ಕ ವಿನಾಯಿತಿ ಮಂಜೂರಾತಿ :</u>

ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಕುಟುಂಬದ ವಾರ್ಷಿಕ ಆದಾಯ ರೂ. 1.00 ಲಕ್ಷ /- ಗಳ ಹಾಗೂ ವರ್ಗ-1ರ ವಿದ್ಯಾರ್ಥಿಗಳ ವಾರ್ಷಿಕ ಆದಾಯ ರೂ. 2.50 ಲಕ್ಷಗಳ ಮಿತಿಯಲ್ಲಿರುವ ಹಿಂದುಳಿದ ವರ್ಗಗಳ ಮತ್ತು ಇತರೆ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿದ ಬೋಧನಾ, ಪರೀಕ್ಷಾ, ಕ್ರೀಡಾ ಗ್ರಂಥಾಲಯ, ಮುಂತಾದ ಶುಲ್ಕಗಳನ್ನು ಬಿಸಿಎಂ ಇಲಾಖೆಯಿಂದ ಪಾವತಿಸಲಾಗುತ್ತದೆ.

10. <u>ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿಕೆ</u>:

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದು ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ನಿಲಯಾರ್ಥಿಗಳಿಗೆ ಕೋರ್ಸುವಾರು ನಿಗದಿಪಡಿಸಿದ ರೂ. 100/- ರಿಂದ ರೂ. 500/-ರ ವರೆಗೆ ನಗದು ಪ್ರೋತ್ಸಾಹಧನ ಮಂಜೂರು ಮಾಡಲಾಗುತ್ತದೆ.

11. <u>ಕಾನೂನು ಪದವೀಧರರಿಗೆ ತರಬೇತಿ ಭತ್ಯೆ ನೀಡಿಕೆ</u>:

ಹಿಂದುಳಿದ ವರ್ಗಗಳ ಕಾನೂನು ಪದವೀಧರರು ವಕೀಲ ವೃತ್ತಿಯನ್ನು ಕೈಗೊಳ್ಳಲು ಸಮಿತಿಯಲ್ಲಿ ಆಯ್ಕೆ ಮಾಡಿ ನುರಿತ ಹಿರಿಯ ವಕೀಲರಿಂದ 4 ವರ್ಷಗಳ ತರಬೇತಿ ಕೊಡಿಸಿ ಮಾಹೆಯಾನ ತಲಾ ರೂ. 2,000/- ದಂತೆ 4 ವರ್ಷಗಳ ಅವಧಿಗೆ ತರಬೇತಿ ಭತ್ಯೆ ಮಂಜೂರು ಮಾಡಲಾಗುವುದು.

12. <u>ಬಿಸಿಎಂ ನಿಲಯಗಳ ಸುಧಾರಣೆ:</u>

ಬಿಸಿಎಂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ನಿಲಯಗಳಿಗೆ ಅತ್ಯಾವಶ್ಯಕವಾಗಿ ಬೇಕಾದ ಪಾತ್ರೆ, ಪೀಠೋಪಕರಣ. ಹಾಸಿಗೆ, ಹೊದಿಕೆ, ಕ್ರೀಡಾ ಸಾಮಗ್ರಿ. ಅನಿಲ ಒಲೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗುವುದು. 2015-16ನೇ ಸಾಲಿನಲ್ಲಿ ಈ ಯೋಜನೆಯಡಿ ವಿದ್ಯಾರ್ಥಿನಿಲಯಗಳಿಗೆ ಟಿವಿ. ಗಣಕಯಂತ್ರ, ಯುಪಿಎಸ್. ದೂರವಾಣಿ, ಇಂಟರ್‌ನೆಟ್. ಸೋಲಾರ್‌ಲೈಟ್ ಚಪ್ಪಲ್ ಸ್ಟ್ಯಾಂಡ್ ಇತ್ಯಾದಿ ಖರೀದಿಗೆ ರೂ 43.915 ಲಕ್ಷ ಬಿಡುಗಡೆಯಾಗಿದ್ದು. ವಿದ್ಯಾರ್ಥಿನಿಲಯಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಒದಗಿಸಲಾಗಿದೆ.

13. <u>ಬಿಸಿಎಂ ನಿಲಯಗಳ ಕಟ್ಟಡ ದುರಸ್ತಿ ಮತ್ತು ನಿರ್ವಹಣೆ:</u>

ಜಿಲ್ಲೆಯಲ್ಲಿರುವ ಬಿಸಿಎಂ ನಿಲಯಗಳ ಕಟ್ಟಡಗಳಿಗೆ ಅವಶ್ಯವಿರುವ ವಾರ್ಷಿಕ ದುರಸ್ತಿ, ಕಂಪೌಂಡ್ ನಿರ್ಮಾಣ, ಶೌಚಾಲಯಗಳ ದುರಸ್ತಿ, ಬಾವಿ ನಿರ್ಮಾಣ, ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

14. **ಕೌಶಲ್ಯ ಯೋಜನೆಯಲ್ಲಿ ತರಬೇತಿ:**

ಹಿಂದುಳಿದ ವರ್ಗಗಳ ನಿರುದ್ಯೋಗಿ ಮಹಿಳಾ ಅಭ್ಯರ್ಥಿಗಳಿಗೆ ಕಂಪ್ಯೂಟರ್, ನರ್ಸಿಂಗ್ ಮುಂತಾದ ಕೋರ್ಸುಗಳಲ್ಲಿ ತರಬೇತಿ ಕೊಡಿಸಿ ಸ್ಟೈಫಂಡ್ ಮಂಜೂರು ಮಾಡಿ ಸ್ವಯಂ ಉದ್ಯೋಗ ಕೈಗೊಳ್ಳಲು ನೆರವು ನೀಡಲಾಗುವುದು.

15. **ಅಲೆಮಾರಿ/ ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ವಿಶೇಷ ವಿದ್ಯಾರ್ಥಿವೇತನ ನೀಡಿಕೆ:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 5 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ ನೀಡಿಕೆ, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ (ಮೆರಿಟ್) ವಿದ್ಯಾರ್ಥಿವೇತನ ನೀಡಲಾಗುತ್ತದೆ.

16.. **ವಿವಿಧ ಜನಾಂಗದ ಸಮುದಾಯ ಭವನಗಳಿಗೆ ಸಹಾಯಧನ :** :

ಈ ಯೋಜನೆಯಡಿ ವಿವಿಧ ಸಮುದಾಯದ ಸಮುದಾಯಭವನ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಲಾಗುತ್ತದೆ.

17. **ಡಿ. ದೇವರಾಜು ಅರಸು ಪ್ರತಿಭಾ ಪುರಸ್ಕರ** : 2015-16ನೇ ಸಾಲಿನಿಂದ ಎಸ್.ಎಸ್.ಎಲ್.ಸಿ, ಪಿಯುಸಿ, ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ 90 ಶೇ ಕ್ಕಿಂತ ಹೆಚ್ಚು ಅಂಕ ಗಳಿಸಿದ 206 ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ತಲಾ ರೂ. 10,000/-, ಪಿಯುಸಿಯಲ್ಲಿ ವಿದ್ಯಾರ್ಥಿಗಳಿಗೆ ತಲಾ ರೂ. 15,000/-, ಪದವಿ ವಿದ್ಯಾರ್ಥಿಗಳಿಗೆ ತಲಾ ರೂ. 20,000/- ,ವೃತ್ತಿಪರ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ತಲಾ ರೂ. 25,000/ ರಂತೆ 28.50 ಲಕ್ಷ ಡಿ. ದೇವರಾಜ ಅರಸು ಪ್ರತಿಭಾ ಪುರಸ್ಕಾರವನ್ನು ನೀಡಲಾಗಿದೆ.

18. **ವಿದೇಶಿ ವ್ಯಾಸಂಗ ವಿದ್ಯಾರ್ಥಿವೇತನ**: ಡಿ. ದೇವರಾಜು ಅರಸು ವಿದೇಶಿ ವ್ಯಾಸಂಗ ವೇತನವನ್ನು 2015-16ನೇ ಸಾಲಿನಿಂದ ಮಂಜೂರು ಮಾಡಲಾಗುತ್ತಿದ್ದು, ವಿದೇಶಗಳಲ್ಲಿ ಸ್ನಾತಕೋತ್ತರ ಪದವಿ/ಪಿಎಚ್.ಡಿ/ಸಂಶೋದನೆ- ಸಂಬಂಧಪಟ್ಟ ಪದವಿ/ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ 10.00 ಲಕ್ಷ ವಿದ್ಯಾರ್ಥಿವೇತನ ನೀಡಲಾಗುತ್ತದೆ.

19. **ವಾಹನ ಚಾಲನಾ ತರಬೇತಿ** :- 2015-16 ನೇ ಸಾಲಿನಿಂದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಉಚಿತ ವಾಹನಚಾಲನಾ ತರಬೇತಿ ನೀಡಲಾಗಿದ್ದು, ಉಚಿತ ಚಾಲನಾ ಪರವಾನಿಗೆ ನೀಡಿ ತರಬೇತಿ ಭತ್ಯೆ 1000/- ರಂತೆ ನೀಡಲಾಗುತ್ತದೆ..

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಉಡುಪಿ ಜಿಲ್ಲೆ

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವತಿಯಿಂದ ಅನುಷ್ಠಾನಗೊಳಸುತ್ತಿರುವ ಕಾರ್ಯಕ್ರಮಗಳು

1. **ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ:**

ಜಿಲ್ಲೆಯಲ್ಲಿ 01 ಮೆಟ್ರಿಕ್ ನಂತರದ ಬಾಲಕಿಯರ ನಿಲಯುಗಳಿದ್ದು 50 ಬಾಲಕಿಯರಿಗೆ ಈ ನಿಲಯದಲ್ಲಿ ಪ್ರವೇಶಾವಕಾಶವಿದ್ದು ಇವರಿಗೆ ಉಚಿತವಾಗಿ ವಸತಿ , ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ

2. **ಖಾಸಗಿ ವಿದ್ಯಾರ್ಥಿನಿಲಯಗಳು:**

ಕಾರ್ಕಳದಲ್ಲಿರುವ ಶ್ರೀ ಭುಜಬಲಿ ಬ್ರಹ್ಮಚರ್ಯ ಮತೀಯ ಅಲ್ಪಸಂಖ್ಯಾತರ ಅನುದಾನಿತ ನಿಲಯದಲ್ಲಿರುವ 25 ವಿದ್ಯಾರ್ಥಿಗಳ ಊಟದ ವೆಚ್ಚಕ್ಕೆ ಮಾಹೆಯಾನ ತಲಾ ರೂ. 750/- ರಂತೆ ಅನುದಾನ ಮಂಜೂರು ಮಾಡಲಾಗುತ್ತದೆ.

3. **ಐ.ಟಿ.ಐ/ಡಿಪ್ಲೊಮಾ ತರಬೇತಿದಾರರಿಗೆ ಸ್ಟೈಫಂಡ್ ನೀಡಿಕೆ:**

ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಐ.ಟಿ.ಐ./ಡಿಪ್ಲೊಮಾ ಕೋರ್ಸುಗಳಲ್ಲಿ ತರಬೇತಿ ಪಡೆಯುತ್ತಿರುವ ಅಲ್ಪಸಂಖ್ಯಾತರ ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಮಾಹೆಯಾನ ತಲಾ ರೂ. 150/- ರಂತೆ ತರಬೇತಿ ಭತ್ಯೆ ಮಂಜೂರು ಮಾಡಲಾಗುತ್ತದೆ.

4. **ಖಾಸಗಿ ಅನಾಥಾಲಯಗಳಿಗೆ ಸಹಾಯಧನ ಮಂಜೂರಾತಿ :**

ಉಡುಪಿ, ಕೆಮ್ಮಣ್ಣು ಮತ್ತು ಕುಂದಾಪುರದಲ್ಲಿರುವ ಖಾಸಗಿ ಅಲ್ಪಸಂಖ್ಯಾತರ ಅನಾಥಾಲಯುಗಳಲ್ಲಿನ 170 ವಿದ್ಯಾರ್ಥಿಗಳಿಗೆ ಊಟದ ವೆಚ್ಚದ ಬಾಬ್ತು ಮಾಹೆಯಾನ ತಲಾ ರೂ. 500 ರಂತೆ ಮಂಜೂರು ಮಾಡಲಾಗುತ್ತದೆ.

5. **ಕಾನೂನು ಪದವೀಧರರಿಗೆ ತರಬೇತಿ ಭತ್ಯೆ ನೀಡಿಕೆ:**

ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ಕಾನೂನು ಪದವೀಧರರನ್ನು ಆಯ್ಕೆ ಮಾಡಿ ವಕೀಲಿ ವೃತ್ತಿಯಲ್ಲಿ ಹಿರಿಯ ವಕೀಲರ ಬಳಿ ತರಬೇತಿ ಕೊಡಿಸಿ ಮಾಹೆಯಾನ ತಲಾ ರೂ. 2000/- ದಂತೆ 4 ವರ್ಷಗಳ ಅವಧಿಗೆ ತರಬೇತಿ ಭತ್ಯೆ ಮಂಜೂರು ಮಾಡಲಾಗುವುದು.

6. **ಶಾದಿಮಹಲ್/ಸಮುದಾಯ ಭವನ ನಿರ್ಮಾಣ ಯೋಜನೆ:**

ಅಲ್ಪಸಂಖ್ಯಾತರ ಸ್ವಯಂಸೇವಾ ಸಂಸ್ಥೆಗಳು ನಿರ್ಮಿಸುವ ಶಾದಿಮಹಲ್ / ಸಮುದಾಯ ಭವನ ನಿರ್ಮಾಣಕ್ಕೆ ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ಸಹಾಯಧನ ಮಂಜೂರು ಮಾಡುವ ಕಾರ್ಯಕ್ರಮವಿದ್ದು ಜಿಲ್ಲಾ ಕೇಂದ್ರದಲ್ಲಿ ನಿರ್ಮಿಸುವ ಸಮುದಾಯ ಭವನಕ್ಕೆ ಗರಿಷ್ಠ 100 ಲಕ್ಷ ಹಾಗೂ ಇತರೆ ಸ್ಥಳಗಳಲ್ಲಿ ನಿರ್ಮಿಸುವ ಸಮುದಾಯಭವನಕ್ಕೆ ಗರಿಷ್ಠ 50 ಲಕ್ಷ ಸಹಾಯಧನ ಮಂಜೂರು ಮಾಡಲಾಗುವುದು.

7. **ಕಲಿಕೆ ಮತ್ತು ಬೋಧನಾ ಸಾಮಗ್ರಿ ಪೂರೈಕೆ:**

ಸರ್ಕಾರ/ ಸರಕಾರದಿಂದ ಮಾನ್ಯತೆ ಪಡೆದ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಕಲಿಕೆ ಗುಣಮಟ್ಟ ಹೆಚ್ಚಿಸಲು ಹಾಗೂ ಕಲಿಕೆಗೆ ಸಂಬಂಧಪಟ್ಟ ಸಾಮಗ್ರಿಗಳನ್ನು ಒದಗಿಸಲು ಮತ್ತು ಬೋಧಕರ ಬೋಧನಾ ಸಾಮರ್ಥ್ಯವನ್ನು ಪರಿಕರಗಳ ಮೂಲಕ ಹೆಚ್ಚಿಸಿ ಅಲ್ಪಸಂಖ್ಯಾತರ ಮಕ್ಕಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಪ್ರತಿ ಶಿಕ್ಷಣ ಸಂಸ್ಥೆಗೆ ರೂ. 10,000/-ಗಳನ್ನು ನೀಡಲು ಅವಕಾಶವಿರುತ್ತದೆ.

8. **ಬಿದಾಯಿ ಯೋಜನೆ:-** ಅಲ್ಪಸಂಖ್ಯಾತರ ಹೆಣ್ಣು ಮಕ್ಕಳಿಗೆ ಮದುವೆಗೆ ರೂ 50000/- ಸಹಾಯಧನ ಯೋಜನೆಯಡಿ 133 ಅಭ್ಯರ್ಥಿಗಳಿಗೆ ರೂ 66.50 ಲಕ್ಷ ಅನುದಾನ ನೀಡಲಾಗಿದೆ.

9. **ಸಮುದಾಯ ಭವನ ಮತ್ತು ಚರ್ಚ್‌ಗಳ ದುರಸ್ತಿ:-**

2015-16 ನೇ ಸಾಲಿನಲ್ಲಿ ಈ ಯೋಜನೆಯಡಿ ಕ್ರಿಶ್ಚಿಯನ್ ಸಮುದಾಯದ 01 ಸಮುದಾಯ ಭವನ ಮತ್ತು 03 ಚರ್ಚ್‌ಗಳ ದುರಸ್ಥಿಗೆ ರೂ. 150.00 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ ಹಾಗೂ ಅಲ್ಪಸಂಖ್ಯಾತರ 2 ಸಂಸ್ಥೆಗಳಿಗೆ ಸಮುದಾಯ ಭವನ ನಿರ್ಮಾಣಕ್ಕೆ ರೂ 75.00 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ

10. **ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆ:-**

2015-16ನೇ ಸಾಲಿನಲ್ಲಿ ಹೊಸದಾಗಿ ವಿದ್ಯಾಸಿರಿ ಯೋಜನೆಯನ್ನು ಜಾರಿಗೊಳಿಸಿದ್ದು, 2926 ವಿದ್ಯಾರ್ಥಿಗಳಿಗೆ 175.56 ಲಕ್ಷಮಂಜೂರು ಮಾಡಲಾಗಿದೆ

11. ಉಡುಪಿ ಕೇಂದ್ರಸ್ಥಾನದಲ್ಲಿ ಅಲ್ಪಸಂಖ್ಯಾತರ ಇಲಾಖೆಯ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ರೂ 1.00 ಕೋಟಿ ಅನುದಾನ ಮಂಜೂರಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

12. 2015-16ನೇ ಸಾಲಿನಿಂದ ಜೈನ್ ಬಸದಿಗಳ ದುರಸ್ಥಿಗೆ / ನವೀಕರಣ/ಜೀರ್ಣೋದ್ಧಾರಕ್ಕಾಗಿ ಅಂದಾಜು ವೆಚ್ಚದ ಶೇ 50% ಅಥವಾ ಗರಿಷ್ಟ 10.00 ಲಕ್ಷದ ವರೆಗೆ ಅನುದಾನ ಮಂಜೂರು ಮಾಡಲು ಯೋಜನೆ ಪ್ರಾರಂಭಿಸಲಾಗಿದೆ.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ.

2016-17ನೇ ಸಾಲಿನ ಜಿಲ್ಲಾವಲಯ ಯೋಜನೆ ಕಾರ್ಯಕ್ರಮಗಳ ಪ್ರಗತಿ ವರದಿ (ರೂ. ಲಕ್ಷಗಳಲ್ಲಿ)

ಅಕ್ಟೋಬರ್ 2016

| ಕ್ರ.ಸಂ | ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಆರ್ಥಿಕ | | | | | | | | | | ಭೌತಿಕ | |
|---|---|---|---|---|---|---|---|---|---|---|---|---|---|
| | | ವಾರ್ಷಿಕ ಗುರಿ | | | ಬಿಡುಗಡೆ ಯಾದ ಅನುದಾನ | | | ಅಕ್ಟೋಬರ್ ಅಂತ್ಯದ ವರೆಗಿನ ಖರ್ಚು | | | ಶೇಕಡಾ ಸಾಧನೆ | ವಾರ್ಷಿಕ ಗುರಿ | ಸಾಧನೆ |
| | | ವೇತನ | ವೇತನೇತರ | ಒಟ್ಟು | ವೇತನ | ವೇತನೇತರ | ಒಟ್ಟು | ವೇತನ | ವೇತನೇತರ | ಒಟ್ಟು | | | |
| 1 | 2 | 3 | | | 4 | 5 | 6 | 7 | 8 | 9 | 10 | 12 | 13 |
| | **ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು** | | | | | | | | | | | | |
| 1 | ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-00-103-0-26 | 73.38 | 224.12 | 297.50 | 55.04 | 168.09 | 223.13 | 53.05 | 66.78 | 119.83 | 54% | 72 ಸಿಬ್ಬಂದಿ 1137 ವಿದ್ಯಾರ್ಥಿಗಳು | 31 ಸಿಬ್ಬಂದಿ 746 ವಿದ್ಯಾರ್ಥಿಗಳು |
| 2 | ಕಟ್ಟಡಗಳ ವೆಚ್ಚ ಮತ್ತು ನಿರ್ವಹಣೆ 2225-00-103-0-40 | | 25.00 | 25.00 | | 18.75 | 18.75 | | 3.72 | 3.72 | 20% | 10 ನಿಲಯಗಳು | 1 ನಿಲಯಗಳು |
| 3 | ವಕೀಲರಿಗೆ ಪ್ರೋತ್ಸಾಹಧನ 2225-03-103-0-58 | | 5.50 | 5.50 | | 4.13 | 4.13 | | 2.10 | 2.10 | 51% | 40 ಕಾನೂನು ಪದವೀಧರರು | 31 ಕಾನೂನು ಪದವೀಧರರು |
| | ಒಟ್ಟು | 73.38 | 254.62 | 328.00 | 55.04 | 190.97 | 246.01 | 53.05 | 72.60 | 125.65 | 51% | | |
| | **ತಾಲೂಕು ಪಂಚಾಯತ್ ಕಾರ್ಯಕ್ರಮಗಳು** | | | | | | | | | | | | |
| 4 | ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ 2225-00-103-0-66 | – | 37.00 | 37.00 | – | 27.75 | 27.75 | | – | 0.00 | 0% | 1700 ವಿದ್ಯಾರ್ಥಿಗಳು | – |
| 5 | ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸುಧಾರಣೆ 2225-00-103-0-72 | – | 15.00 | 15.00 | – | 11.25 | 11.25 | | 1.05 | 1.05 | 9% | 35 ನಿಲಯಗಳು | 4 ನಿಲಯಗಳು |
| | ಒಟ್ಟು | 0.00 | 52.00 | 52.00 | 0.00 | 39.00 | 39.00 | 0.00 | 1.05 | 1.05 | 3% | | |
| | ಒಟ್ಟು (ಜಿ.ಪಂ+ತಾ.ಪಂ.) | 73.38 | 306.62 | 380.00 | 55.04 | 229.97 | 285.01 | 53.05 | 73.65 | 126.70 | 44% | | |

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಮತ್ತು
ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ.

## ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ.

## 2016-17ನೇ ಸಾಲಿನ ಜಿಲ್ಲಾವಲಯ ಯೋಜನೇತರ ಕಾರ್ಯಕ್ರಮಗಳ ಪ್ರಗತಿ ವರದಿ (ರೂ. ಲಕ್ಷಗಳಲ್ಲಿ)

ಅಕ್ಟೋಬರ್ 2016

| ಕ್ರ .ಸಂ | ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ | 2016-17ನೇ ಸಾಲಿಗೆ ನಿಗದಿಯಾದ ಅನುದಾನ | | | ಜಿಲ್ಲಾ ಪಂಚಾಯತ್ ನಿಂದ ಬಿಡುಗಡೆಯಾದ ಅನುದಾನ | | | 2016-17ನೇ ಸಾಲಿನಲ್ಲಿ ಅಕ್ಟೋಬರ್ 2016ರ ವರೆಗೆ ಆದ ಖರ್ಚು | | | ಶೇಕಡ ಪ್ರಗತಿ | ಭೌತಿಕ | |
|---|---|---|---|---|---|---|---|---|---|---|---|---|---|
| | | ವೇತನ | ವೇತನೇತರ | ಒಟ್ಟು | ವೇತನ | ವೇತನೇತರ | ಒಟ್ಟು | ವೇತನ | ವೇತನೇತರ | ಒಟ್ಟು | | ಗುರಿ | ಸಾಧನೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| | **ಜಿಲ್ಲಾ ಪಂಚಾಯತ್ ಯೋಜನೇತರ ಕಾರ್ಯಕ್ರಮಗಳು** | | | | | | | | | | | | |
| 1 | ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-00-103-0-26 | 196.00 | 268.00 | 464.00 | 147.00 | 201.00 | 348.00 | 106.59 | 106.52 | 213.11 | 61% | 118 ಸಿಬ್ಬಂಧಿಗಳು 1620 ವಿದ್ಯಾರ್ಥಿಗಳು | 52ಸಿಬ್ಬಂಧಿಗಳು 1558 ವಿದ್ಯಾರ್ಥಿಗಳು |
| 2 | ಇತರೆ ಹಿಂದುಳಿದ ವರ್ಗಗಳಿಗೆ ಇತರೆ ರಿಯಾಯಿತಿಗಳು 2225-00-103-0-28 | | 683.00 | 683.00 | | 512.25 | 512.25 | | 170.75 | 170.75 | 33% | 15000 ವಿದ್ಯಾರ್ಥಿಗಳು | 6274 ವಿದ್ಯಾರ್ಥಿಗಳು |
| 3 | ನಿರ್ದೇಶನ ಮತ್ತು ಆಡಳಿತ ಕಾರ್ಯನಿರ್ವಾಹಕ ಸಿಬ್ಬಂದಿ 2225-00-103-0-39 | 29.00 | 9.00 | 38.00 | 21.75 | 6.75 | 28.50 | 20.25 | 1.44 | 21.69 | 76% | 12 ಸಿಬ್ಬಂದಿಗಳು | 6 ಸಿಬ್ಬಂದಿಗಳು |
| 4 | ದೇವರಾಜು ಅರಸು ಜನ್ಮ ದಿನಾಚರಣೆ 2225-00-103-0-56 | | 1.00 | 1.00 | | 0.75 | 0.75 | | 0.74 | 0.74 | 99% | 1 ಕಾರ್ಯಕ್ರಮ | 1 ಕಾರ್ಯಕ್ರಮ |
| | **ಒಟ್ಟು** | 225.00 | 961.00 | 1186.00 | 168.75 | 720.75 | 889.50 | 126.84 | 279.45 | 406.29 | 46% | | |
| | **ತಾಲೂಕು ಪಂಚಾಯತ್ ಯೋಜನೇತರ ಕಾರ್ಯಕ್ರಮಗಳು** | | | | | | | | | | | | |
| 5 | ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿ ಗಳಿಗೆ ವಿದ್ಯಾರ್ಥಿವೇತನ ಮಂಜೂರಾತಿ 2225-00-103-0-66 | | 96.00 | 96.00 | | 72.00 | 72.00 | | 0.00 | 0.00 | 0% | 4300 ವಿದ್ಯಾರ್ಥಿಗಳು | - |
| 6 | ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸುಧಾರಣೆ 2225-00-103-0-72 | | 5.00 | 5.00 | | 3.76 | 3.76 | | 0.00 | 0.00 | 0% | 10 ನಿಲಯಗಳು | - |
| 7 | ಹಿಂದುಳಿದ ವರ್ಗಗಳ ತಾಲೂಕು ವಿಸ್ತರಣಾ ಕಚೇರಿಗಳು 2225-00-103-0-74 | 9.00 | 5.00 | 14.00 | 6.89 | 2.80 | 9.69 | 6.28 | 1.67 | 7.95 | 82% | 3 ಸಿಬ್ಬಂಧಿಗಳು | 3 ಸಿಬ್ಬಂಧಿಗಳು |

| ಕ್ರ.ಸಂ | ಕಾರ್ಯಕ್ರಮದ ಹೆಸರು ಮತ್ತು ಲೆಕ್ಕಶೀರ್ಷಿಕೆ | 2016-17ನೇ ಸಾಲಿಗೆ ನಿಗದಿಯಾದ ಅನುದಾನ | | | ಜಿಲ್ಲಾ ಪಂಚಾಯತ್ ನಿಂದ ಬಿಡುಗಡೆಯಾದ ಅನುದಾನ | | | 2016-17ನೇ ಸಾಲಿನಲ್ಲಿ ಅಕ್ಟೋಬರ್ 2016ರ ವರೆಗೆ ಆದ ಖರ್ಚು | | | ಶೇಕಡ ಪ್ರಗತಿ | ಭೌತಿಕ | |
|---|---|---|---|---|---|---|---|---|---|---|---|---|---|
| | | ವೇತನ | ವೇತನೇತರ | ಒಟ್ಟು | ವೇತನ | ವೇತನೇತರ | ಒಟ್ಟು | ವೇತನ | ವೇತನೇತರ | ಒಟ್ಟು | | ಗುರಿ | ಸಾಧನೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| 8 | ಹೊಲಿಗೆ ತರಬೇತಿ ಕೇಂದ್ರಗಳು 2225-00-103-0-78 | 0.00 | 6.00 | 6.00 | - | 4.50 | 4.50 | 0.00 | 0.27 | 0.27 | 6% | 20 ವಿದ್ಯಾರ್ಥಿಗಳು | 14 ವಿದ್ಯಾರ್ಥಿಗಳು |
| 9 | ವಿದ್ಯಾರ್ಥಿನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಕಗಳು 2225-00-103-0-79 | | 3.00 | 3.00 | | 2.25 | 2.25 | | 0.72 | 0.72 | 32% | 180 ವಿದ್ಯಾರ್ಥಿಗಳು | 223 ವಿದ್ಯಾರ್ಥಿಗಳು |
| | ಒಟ್ಟು | 9.00 | 115.00 | 124.00 | 6.89 | 85.31 | 92.20 | 6.28 | 2.66 | 8.94 | 10% | | |
| | ಒಟ್ಟು(ಜಿ.ಪಂ+ತಾ.ಪಂ.) | 234.00 | 1076.00 | 1310.00 | 175.64 | 806.06 | 981.70 | 133.12 | 282.11 | 415.23 | 42% | | |

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಮತ್ತು
ಅಲ್ಪಸಂಖ್ಯಾತರ ಇಲಾಖೆ. ಉಡುಪಿ ಜಿಲ್ಲೆ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ.

2016-17ನೇ ಸಾಲಿನ ರಾಜ್ಯವಲಯ ಯೋಜನೆ ಕಾರ್ಯಕ್ರಮಗಳ ಪ್ರಗತಿ ವರದಿ (ರೂ. ಲಕ್ಷಗಳಲ್ಲಿ)

ಅಕ್ಟೋಬರ್ 2016

| ಕ್ರ. ಸಂ | ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ | 2016-17ನೇ ಸಾಲಿಗೆ ಬಿಡುಗಡೆಯಾದ ಅನುದಾನ | ಅಕ್ಟೋಬರ್ 2016ರ ಅಂತ್ಯದವರೆಗೆ ಖರ್ಚಾದ ಅನುದಾನ | ಶೇಕಡಾ ಪ್ರಗತಿ | ಭೌತಿಕ ಪ್ರಗತಿ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಶುಲ್ಕ ವಿನಾಯಿತಿ ನೀಡಿಕೆ 2225-03-277-2-51 | 45.20 | 45.18 | 100% | 1324 ವಿದ್ಯಾರ್ಥಿಗಳು | |
| 2 | ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-03-277-2-53 | 58.28 | 31.05 | 53% | 305 ವಿದ್ಯಾರ್ಥಿಗಳು | |
| 3 | ಡಾಟಾ ಎಂಟ್ರಿ ಆಪರೇಟರ್‌ಗಳ ವೇತನ 2225-03-277-3-11 | 1.70 | 1.41 | 83% | | |
| 4 | ವಿದ್ಯಾಸಿರಿ 2225-03-283-0-03 | 35.03 | 35.03 | 100% | 1292 ವಿದ್ಯಾರ್ಥಿಗಳು | |
| 5 | ಅಲೆಮಾರಿ ವಿದ್ಯಾಸಿರಿ 2225-03-283-0-03 | 1.73 | 1.73 | 100% | 57 ವಿದ್ಯಾರ್ಥಿಗಳು | |
| 6 | ಹಿಂದುಳಿದ ವರ್ಗಗಳ ಸಮುದಾಯ ಭವನ ನಿರ್ಮಾಣ 2225-03-001-0-05 | 47.00 | 34.50 | 73% | 5 ಭವನ | |
| 7 | ನರ್ಸಿಂಗ್ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ನೀಡಿಕೆ 2225-03-277-2-37 | 9.68 | - | - | - | |
| 8 | ಪ್ರತಿಭಾ ಪುರಸ್ಕಾರ 2225-03-277-2-37 | 17.50 | - | - | - | |
| | | 216.12 | 148.90 | 69% | | |

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಮತ್ತು
ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ.

## ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ.

### 2016-17ನೇ ಸಾಲಿನ ಜಿಲ್ಲಾವಲಯ ಯೋಜನೆ / ಯೋಜನೇತರ (ಅಲ್ಪಸಂಖ್ಯಾತರ) ಕಾರ್ಯಕ್ರಮಗಳ ಪ್ರಗತಿ ವರದಿ (ರೂ. ಲಕ್ಷಗಳಲ್ಲಿ)

ಅಕ್ಟೋಬರ್ 2016

| ಕ್ರ.ಸಂ | ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಆರ್ಥಿಕ | | | | | | | | | | ಭೌತಿಕ | |
|---|---|---|---|---|---|---|---|---|---|---|---|---|---|
| | | ವಾರ್ಷಿಕ ಗುರಿ | | | ಬಿಡುಗಡೆ ಯಾದ ಅನುದಾನ | | | ಅಕ್ಟೋಬರ್ ಅಂತ್ಯದ ವರೆಗಿನ ಖರ್ಚು | | | ಶೇಕಡಾ ಸಾಧನೆ | ವಾರ್ಷಿಕ ಗುರಿ | ಸಾಧನೆ |
| | | ವೇತನ | ವೇತನೇತರ | ಒಟ್ಟು | ವೇತನ | ವೇತನೇತರ | ಒಟ್ಟು | ವೇತನ | ವೇತನೇತರ | ಒಟ್ಟು | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| | **ಜಿಲ್ಲಾ ವಲಯ ಯೋಜನೆ ಕಾರ್ಯಕ್ರಮಗಳು** | | | | | | | | | | | | |
| 1 | ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್‌ಗಳು 2225-00-103-0-34 | | 7.00 | 7.00 | | 5.24 | 5.24 | – | 1.52 | 1.52 | 29% | 5 ಸಿಬ್ಬಂದಿ 50 ವಿದ್ಯಾರ್ಥಿಗಳು | 1 ಸಿಬ್ಬಂದಿ 33 ವಿದ್ಯಾರ್ಥಿಗಳು |
| 2 | ಅಲ್ಪಸಂಖ್ಯಾತರಿಗಾಗಿ ತರಬೇತಿ ಮತ್ತು ಕಾನೂನು ಪದವೀಧರರಿಗೆ ಶಿಷ್ಯವೇತನ 2225-00-103-0-44 | | 0.50 | 0.50 | | 0.38 | 0.38 | – | 0.37 | 0.37 | 97% | 8 ಕಾನೂನು ಪದವೀಧರರು | 6 ಕಾನೂನು ಪದವೀಧರರು |
| 3 | ಕಾರ್ಯಕಾರಿ ಸಿಬ್ಬಂಧಿ 2225-00-103-0-51 | 0.00 | 3.00 | 3.00 | 0.00 | 2.25 | 2.25 | – | 1.96 | 1.96 | 87% | 4 ಸಿಬ್ಬಂದಿ | – |
| 4 | ಔದ್ಯಮಿಕ ತರಬೇತಿ ಸಂಸ್ಥೆ/ ಡಿಪ್ಲೊಮಾ ಕೋರ್ಸುಗಳ ಪ್ರಶಿಕ್ಷುಗಳಿಗೆ ಶಿಷ್ಯವೇತನ- ಅಲ್ಪಸಂಖ್ಯಾತರು 2225-00-103-0-84 | | 0.50 | 0.50 | | 0.37 | 0.37 | 0.00 | | 0.00 | 0% | 28 ವಿದ್ಯಾರ್ಥಿಗಳು | – |
| | ಒಟ್ಟು | 0.00 | 11.00 | 11.00 | 0.00 | 8.24 | 8.24 | 0.00 | 3.85 | 3.85 | 47% | | |
| | **ಜಿಲ್ಲಾ ವಲಯ ಯೋಜನೇತರ ಕಾರ್ಯಕ್ರಮಗಳು** | | | | | | | | | | | | |
| 1 | ಅಲ್ಪಸಂಖ್ಯಾತರ ಅನಾಥಾಲಯಗಳಿಗೆ ಸಹಾಯಧನ 2225-00-103-0-49 | | 12.00 | 12.00 | | 9.00 | 9.00 | – | 1.34 | 1.34 | 15% | 170 ವಿದ್ಯಾರ್ಥಿಗಳು | 124 ವಿದ್ಯಾರ್ಥಿಗಳು |
| 2 | ಅಲ್ಪಸಂಖ್ಯಾತರ ವರ್ಗದ ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-00-103-0-50 | | 2.00 | 2.00 | | 1.50 | 1.50 | – | 0.29 | 0.29 | 19% | 25 ವಿದ್ಯಾರ್ಥಿಗಳು | 25 ವಿದ್ಯಾರ್ಥಿಗಳು |
| | ಒಟ್ಟು | | 14.00 | 14.00 | 0.00 | 10.50 | 10.50 | 0.00 | 1.63 | 1.63 | 16% | | |

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಮತ್ತು
ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ.

2016-17ನೇ ಸಾಲಿನ ರಾಜ್ಯವಲಯ ಯೋಜನೆ (ಅಲ್ಪಸಂಖ್ಯಾತರ) ಕಾರ್ಯಕ್ರಮಗಳ ಪ್ರಗತಿ ವರದಿ (ರೂ. ಲಕ್ಷಗಳಲ್ಲಿ)

ಅಕ್ಟೋಬರ್ 2016

| ಕ್ರ.ಸಂ | ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಬಿಡುಗಡೆ ಯಾದ ಅನುದಾನ | ಅಕ್ಟೋಬರ್ ಅಂತ್ಯದ ವರೆಗಿನ ಖರ್ಚು | ಶೇಕಡಾ ಸಾಧನೆ | ಭೌತಿಕ ಸಾಧನೆ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಸಮುದಾಯ ಭವನ ಮತ್ತು ಚರ್ಚ್ ದುರಸ್ತಿ | 40.00 | 2.50 | 6% | 2 ಚರ್ಚ್ ದುರಸ್ತಿ | |
| 2 | ಅಲ್ಪಸಂಖ್ಯಾತರ ಶಾದಿಮಹಲ್/ಸಮುದಾಯ ಭವನ ನಿರ್ಮಾಣ 2225-03-277-2-48 | 25.00 | 10.00 | 40% | 1 ಸಮುದಾಯ ಭವನ | |
| 3 | ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಅರಿವು ಮೂಡಿಸುವ ಮಾಹಿತಿ ಕೇಂದ್ರ 2250-00-102-5-02 | 2.10 | 1.75 | 83% | – | – |
| 4 | ಮುಸ್ಲಿಂ ಹೆಣ್ಣು ಮಕ್ಕಳಿಗೆ/ವಿಚ್ಛೇದಿತ ಮಹಿಳೆ ಮತ್ತು ವಿಧವೆಯರಿಗೆ ಮದುವೆ ಕಾರ್ಯಗಳಿಗೆ ಸಹಾಯಧನ 2225-03-800-0-07 | 45.00 | 45.00 | 100% | 90 ಅಭ್ಯರ್ಥಿಗಳು | |
| 5 | ಕ್ರಿಶ್ಚಿಯನ್ ಹೆಣ್ಣು ಮಕ್ಕಳಿಗೆ/ವಿಚ್ಛೇದಿತ ಮಹಿಳೆ ಮತ್ತು ವಿಧವೆಯರಿಗೆ ಮದುವೆ ಕಾರ್ಯಗಳಿಗೆ ಸಹಾಯಧನ 2225-03-102-0-14 | 28.50 | 28.50 | 100% | 57 ಅಭ್ಯರ್ಥಿಗಳು | |
| 6 | ಜೈನ್ ಹೆಣ್ಣು ಮಕ್ಕಳಿಗೆ/ವಿಚ್ಛೇದಿತ ಮಹಿಳೆ ಮತ್ತು ವಿಧವೆಯರಿಗೆ ಮದುವೆ ಕಾರ್ಯಗಳಿಗೆ ಸಹಾಯಧನ 2225-03-277-2-82 | 11.50 | 7.00 | 61% | 14 ಅಭ್ಯರ್ಥಿಗಳು | |
| 7 | ಅಲ್ಪಸಂಖ್ಯಾತರ ಕಲ್ಯಾಣ ಕಚೇರಿ ನಿರ್ವಹಣೆ 2225-03-001-0-03 | 2.00 | 0.67 | 34% | 2 ಸಿಬ್ಬಂದಿ | |
| 8 | ವಿದ್ಯಾರ್ಥಿನಿಲಯಗಳಿಗೆ ತಟ್ಟೆ ಲೋಟ ಖರೀದಿ 2225-03-277-2-64 | 1.00 | – | – | | |
| | ಒಟ್ಟು | 155.10 | 95.42 | 62% | | |

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಮತ್ತು
ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ